


**ಅತಿಯಾದ ಎಚ್ಚರ ಅಗತ್ಯ**
'ಹೆಣ್ಣುಮಕ್ಕಳೇಕೆ ಕಣ್ಮರೆಯಾಗುತ್ತಾರೆ?' ಸುಚೇತನಾ ನಾಯ್ಕ ಅವರ ಮುಖಪುಟ ಲೇಖನದ ವಿವರಗಳನ್ನು ಓದಿ ಆತಂಕ ಉಂಟಾಯಿತು. ಪೋಷಕರು ಅತಿಯಾದ ಎಚ್ಚರಿಕೆ ವಹಿಸಬೇಕಾದ ಅಗತ್ಯವನ್ನು ಈ ಮಾಹಿತಿ ಮನಗಾಣಿಸಿದೆ.

ಬಿ.ಎಸ್.ನಾರಾಯಣಸ್ವಾಮಿ, ಬೋಧನ ಹೊಸಹಳ್ಳಿ/ ಪಿ.ಗೋವಿಂದರಾಜ್, ಶಿವಮೊಗ್ಗ/ ಕೋಟೆ ಸೂರ್ಯನಾರಾಯಣ ರಾವ್, ಬೆಂಗಳೂರು/ ಪಿ.ಎಸ್.ನಾರಾಯಣ ಭಟ್, ಕ್ಯೊಲ/ ಪಿ.ಜಿ. ರಾಘವೇಂದ್ರ, ಮೈಸೂರು

**ಕಾಯುವಿಕೆಯೂ ತಪಸ್ಸು!**
'ಕಾಯುವ ಕಾಯಕ' ಕುರಿತ ವೈನತೇಯರ ವಿಚಾರ ಲಹರಿ ವಿಶ್ಲೇಷಣಾತ್ಮಕವಾಗಿದೆ; ಮೌಲಿಕವಾಗಿದೆ.

-ಎಸ್. ಚನ್ನಪ್ಪ, ಮೈಸೂರು/ ಟಿ.ಎನ್. ಸರಸ್ವತಿ, ತಿಪಟೂರು/ ಶ್ರೀನಾಥ ಕೊನೇಟಿ, ಬೆಂಗಳೂರು

**ಟಿಪ್ಸ್ ಉಪಯುಕ್ತ**
ಆರೋಗ್ಯ ಅಂಕಣದಲ್ಲಿ ಟಿಪ್ಸ್ ನೀಡಿರುವ 'ಹೊಟ್ಟೆ ಕೆಟ್ಟರೆ ಬೆಳ್ಳುಳ್ಳಿ ತಿನ್ನಿ', 'ದಿನಕ್ಕೊಂದು ಮೀನು', 'ಜೀವನಶೈಲಿಯೇ ಹೃದಯಾಘಾತಕ್ಕೆ ಕಾರಣ' ಎಂಬ ಮಾಹಿತಿಗಳು ಉಪಯುಕ್ತವಾಗಿವೆ.

- ಡಿ.ಎಲ್.ನಾಗರಾಜ್, ಚನ್ನಗಿರಿ

**ಅಬ್ಬಾ ವಿಚಿತ್ರ ಊಟ!**
ಮಿಂಚುಳ್ಳಿಯ ಬಾಡೂಟ.. ಅಬ್ಬಾ.. ವಿಚಿತ್ರ!

ನಿತ್ಯ ಎಸ್. ಮೂಡಬಿದರೆ, ರತ್ನಗಿರಿ

**ನಿಜಕ್ಕೂ ವಂಡರ್!**
ವಂಡರ್‌ಪುಟದ ಸಚಿತ್ರ ಮಾಹಿತಿ ಕುತೂಹಲಕರ.

-ಕಾಡನೂರು ರಾಮಶೇಷ, ಹುಲಿಮಂಗಲ

**ಸಕಾಲಿಕ ಲೇಖನ**
'ಶಿಕ್ಷಕರ ಕೆಲಸ ಖಾಲಿ ಇಲ್ಲ!' ಪರಮೇಶ್ವರಯ್ಯ ಸೊಪ್ಪಿಮಠರ ಲೇಖನ ಸಕಾಲಿಕವಾಗಿತ್ತು.

-ಪಿ.ಎಸ್. ನಾರಾಯಣ ಭಟ್, ಪುತ್ತೂರು

**ರೈತರಿಗೆ ಉಪಯುಕ್ತ**
'ದಡ್ಡಿ ಕಮಲಾಪುರದ-ಧಾರವಾರಿ ಎಮ್ಮೆ' ಡಾ.ನಾಗರಾಜ ಕೆ.ಎಂ. ಅವರ ಚಿತ್ರ-ಮಾಹಿತಿ ರೈತರಿಗೆ ಉಪಯುಕ್ತವಾಗಿದೆ.

-ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

**ಹೊಸ ಪ್ರಶ್ನೆ**
'ಬದಲಾದ ಬಣ್ಣ ತಂದೀತೆ ಚಿನ್ನ?' ಜಿ.ಕೆ. ಕ್ರೀಡಾ ಲೇಖನ ಹೊಸ ಪ್ರಶ್ನಾವಳಿ ಹುಟ್ಟುಹಾಕಿತು.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

**ಸತ್ಯಕ್ಕೆ ಹತ್ತಿರ**
ಎಂ.ವೇದಾವತಿಯವರ 'ಅಯ್ಯೋ ಐಸಿಯು' ಬರಹದ ಬಹಳಷ್ಟು ಸಂಗತಿಗಳು ಸತ್ಯಕ್ಕೆ ಹತ್ತಿರವಾಗಿವೆ.

-ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

**ಸುರಸುಂದರಿ ರಮ್ಯಾ**



ಸುರಸುಂದರಿ ರಮ್ಯಾಳ ಚೆಲುವಿನ ಚಿತ್ರ ನೋಡಿ ಖುಷಿಯಾಯಿತು. ಕನ್ನಡ ಚಿತ್ರರಂಗದ ಅಪರೂಪದ ಸುಂದರ ಕಲಾವಿದೆ ರಮ್ಯಾ ಚೆಲುವಿನಲ್ಲಿ ಅಂದಕಾಲತ್ತಿಲ್ ಕಲಾವಿದೆಯರ ನೆನಪು ತರುತ್ತಿದ್ದಾರೆ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

**ಬಾಲ ಕಾರ್ಮಿಕರ ಕಥೆ**
ಮೇ10ರ 'ಎಳೆಯರ ಅಂಗಳ' ಅಂಕಣದಲ್ಲಿ ಶಿವರಾಮ ಭಟ್ ಹತ್ತೊಕ್ಕಲು ಇವರ 'ವ್ಯಾಪಾರಿ ಮತ್ತು ಬಾಲಕ' ಕಥೆಯಲ್ಲಿ ಶ್ರೀಮಂತ ವ್ಯಾಪಾರಿಯೊಬ್ಬ, ಬಾಲಕನನ್ನು ಶಾಲೆಗೆ ಸೇರಿಸುತ್ತಾನಾದರೂ, ತನ್ನ ಅಂಗಡಿಯಲ್ಲಿ ಕೆಲಸ ಮಾಡಲು ಹಚ್ಚುತ್ತಾನೆ. ಇದು ಬಾಲ ಕಾರ್ಮಿಕರನ್ನು ಶೋಷಿಸುವ ಪರಿ ಎಂದೇ ನನಗನಿಸಿದೆ. ಇಂತಹ ಕಥೆ ವರ್ತಮಾನಕ್ಕೆ ಎಷ್ಟರಮಟ್ಟಿಗೆ ಪ್ರಸ್ತುತ?

-ಡಿ. ದೊಡ್ಡ ಲಿಂಗೇಗೌಡ, ಮಳವಳ್ಳಿ

**ಕುತೂಹಲದ 'ಜಂಬೂಕ'**
ಟಿ.ತಿಮ್ಮಪ್ಪ ಅವರ 'ಜಂಬೂಕ' ಧಾರಾವಾಹಿಯಲ್ಲಿ ಅಂಕಿತ ಆನೆಯಿಂದ ತಪ್ಪಿಸಿಕೊಂಡು ನೀರಿನಲ್ಲಿ ಕೊಚ್ಚಿಹೋಗುವ ಸಂದರ್ಭ ದುಃಖಕರವಾಗಿತ್ತು. ಅಷ್ಟರಲ್ಲಿ ಸದ್ಯ ಬದುಕಿ ಬಂದನಲ್ಲ ಎಂದು ಸುಧಾರಿಸಿಕೊಳ್ಳುವಷ್ಟರಲ್ಲಿ ಮತ್ತೇನೋ ಅವಘಡ. ಪ್ರತಿವಾರವೂ ಮುಂದೇನಾಯಿತು ಎಂದು ಕುತೂಹಲದಿಂದ ಕಾಯುವಂತೆ ಮಾಡಿದೆ.

-ಶ್ರುತಿ ಕೆ. ಮಠದ, ಚಿತ್ರದುರ್ಗ

**ಹೊಸ ಲೋಕದ ಪರಿಚಯ**
'ಜಂಬೂಕ' ಧಾರಾವಾಹಿಯಲ್ಲಿ ಕಾಡು ಹಾಗೂ ಕಾಡುಪ್ರಾಣಿಗಳ ವಿವರಗಳು ಹೇರಳವಾಗಿವೆ. ಬಯಲುಸೀಮೆಯ ನಮಗೆ ಕಾಡಿನ ಅನೂಹ್ಯ ಜಗತ್ತು ಅಚ್ಚರಿ ಹುಟ್ಟಿಸಿದೆ. ನಮಗೆ ಗೊತ್ತಿರದ ಹೊಸ ಲೋಕವೊಂದನ್ನು ಕಾದಂಬರಿ ಪರಿಚಯಿಸಿದೆ.

ಕೊಹಿಮ, ಬಸರಕೋಡು/ ರೇಣುಕಾ ಪಾಟೀಲ, ದಾವಣಗೆರೆ

**ಯಕ್ಷಗಾನ ತರಬೇತಿಗೆ ಅರ್ಜಿ ಆಹ್ವಾನ**
ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ನಡೆಸುವ 2012-13ನೇ ಸಾಲಿನ ಯಕ್ಷಗಾನ ತರಬೇತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಹತೆ 5ನೇ ತರಗತಿ ಅಥವಾ ಕನ್ನಡ ಓದಲು, ಬರೆಯಲು ತಿಳಿದಿರಬೇಕು. ಅನುಭವ, ಆಸಕ್ತಿ, ವಯಸ್ಸು, ಸ್ಪಷ್ಟವಾದ ವಿಳಾಸದೊಂದಿಗೆ ಕೆರೆಮನೆ ಶಿವಾನಂದ ಹೆಗಡೆ, ನಿರ್ದೇಶಕ, ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ, ಅಂಚೆ: ಗುಣವಂತೆ, ತಾ: ಹೊನ್ನಾವರ, ಉ.ಕ.-581348 ಇಲ್ಲಿಗೆ ಅರ್ಜಿ ಕಳಿಸಿಕೊಡಬಹುದು.

ನಿರಂತರವಾಗಿ ಕಲಿಯುತ್ತಿರುವ ವಿದ್ಯಾರ್ಥಿಗಳ ಹೊರತಾಗಿ ಅನ್ಯ ಯಕ್ಷಗಾನಾಸಕ್ತರಿಗೆ ಪ್ರತಿ ಶನಿವಾರ ಹಾಗೂ ಭಾನುವಾರ ಮತ್ತು ರಜಾದಿನಗಳಲ್ಲಿ ತರಗತಿಗಳು ನಡೆಯುತ್ತವೆ.

ಜೂನ್ ತಿಂಗಳ ಮೊದಲ ವಾರದಿಂದ ಒಂದು ತಿಂಗಳು ಉಚಿತವಾಗಿ ಯಕ್ಷಗಾನ ಕಲಿಕೆಯ ಬೇಸಿಗೆ ಶಿಬಿರ ನಡೆಯಲಿದೆ. ವಿವರಕ್ಕೆ: 08387-234188, ಮೊ. 9448189140






Available at all Leading Ayurvedic & Chemist Shops